**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ ನೃಪತುಂಗ ರಸ್ತೆ ಬೆಂಗಳೂರು-01**

ಸಂಖ್ಯೆ: ಸಿ5(6) ಮಸಖ 04/2013-14 ದಿನಾಂಕ: 05-12-2014

## ಅಲ್ಪಾವಧಿ ಟೆಂಡರ್ ಪ್ರಕಟಣೆ

## ಮಸ್ತಕಗಳ ಬಾಕ್ಸ್‌ಗಳ ಸಾಗಾಣಿಕೆಗಾಗಿ ದರಪಟ್ಟಿ ಆಹ್ವಾನ

2013-14ನೇ ಸಾಲಿನ ಮಸ್ತಕ ಸಗಟು ಖರೀದಿ ಯೋಜನೆಯಡಿಯಲ್ಲಿ ಸರ್ಕಾರಿ ಪ್ರೌಢಶಾಲಾ ಗ್ರಂಥಾಲಯಗಳಿಗೆ ಸರಬರಾಜು ಮಾಡಲು ಮಸ್ತಕ ಆಯ್ಕೆ ಸಮಿತಿಯು ಆಯ್ಕೆ ಮಾಡಿರುವ ಮಸ್ತಕಗಳನ್ನು ರಟ್ಟಿನ ಬಾಕ್ಸ್‌ಗಳಲ್ಲಿ ಪ್ಯಾಕ್ ಮಾಡಿದ್ದು ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಾಗಾಣಿಕೆ ಮಾಡುವ ಉದ್ದೇಶದಿಂದ ನೋಂದಾಯಿತ ಸಗಟು ಸಾಗಾಣಿಕೆ ಸಂಸ್ಥೆಗಳಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

| ಕ್ರ ಸಂ | **ವಿಷಯ** | **ವಿವರ** |
|---|---|---|
| 1 | ಶೀರ್ಷಿಕೆ | ಮಸ್ತಕಗಳ ಬಂಡಲ್ಲುಗಳು |
| 2 | ಪ್ರತಿ ಬಾಕ್ಸ್‌ನ ತೂಕ | ಅಂದಾಜು 20 ಕೆ.ಜಿ. |
| 3 | ಸರಬರಾಜು ಮಾಡಬೇಕಾದ ಸ್ಥಳ | ಸೂಚಿತ ಸಂಖ್ಯೆಗಳಿಗೆ ಅನುಗುಣವಾಗಿ ರಾಜ್ಯದ ಎಲ್ಲ 34 ಡಿಡಿಪಿಐ ಕಛೇರಿಗಳಿಗೆ |

**ಷರತ್ತುಗಳು:**

- ಸಾಗಾಣಿಕೆದಾರರು ಸಲ್ಲಿಸುವ ದರಪಟ್ಟಿಯು 90 ದಿನಗಳವರೆಗೆ ಚಾಲ್ತಿಯಲ್ಲಿರುತ್ತದೆ.
- ದರಪಟ್ಟಿಯೊಂದಿಗೆ ರೂ.5,000/-ಗಳ ಇ.ಎಂ.ಡಿ. ಹಣವಾಗಿ "**ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು**" ಇವರ ಹೆಸರಿಗೆ ಬ್ಯಾಂಕ್ ಹುಂಡಿಯನ್ನು ಖರೀದಿಸಿ ಲಗತ್ತಿಸಬೇಕು.
- ಪ್ಯಾಕಿಂಗ್ ಮಾಡಲಾಗಿರುವ 1600 ಬಾಕ್ಸ್‌ಗಳನ್ನು ಸಾಗಾಣಿಕೆ ಮಾಡುವುದು.
- **ತಾಂತ್ರಿಕ ದಾಖಲೆಗಳು ಈ ಕೆಳಕಂಡ ಅಂಶಗಳನ್ನು ಒಳಗೊಂಡಿರಬೇಕು.**
  ಅ) ಸಂಸ್ಥೆಯು ಕರ್ನಾಟಕ ಸರ್ಕಾರದಿಂದ ನೋಂದಣಿಯಾಗಿರುವ ದಾಖಲೆಗಳನ್ನು ಒದಗಿಸಬೇಕು.
  ಆ) 2012-13 ಮತ್ತು 2013-14ನೇ ಸಾಲಿನ ಆದಾಯ ತೆರಿಗೆ ಪಾವತಿಸಿರುವ ದಾಖಲೆ.
- ತಾಂತ್ರಿಕ ದಾಖಲೆಗಳನ್ನು ಸೂಕ್ತ ರೀತಿಯಲ್ಲಿ ನೀಡದಿದ್ದಲ್ಲಿ ತಮ್ಮ ಪ್ರಸ್ತಾವನೆಯನ್ನು ತಿರಸ್ಕರಿಸಲಾಗುವುದು
- ನಿಗಧಿತ ಅವಧಿಯೊಳಗೆ ಸರಬರಾಜು ಕಾರ್ಯವನ್ನು ಪೂರೈಸದಿದ್ದಲ್ಲಿ ದಿನವೊಂದಕ್ಕೆ ಒಟ್ಟು ಮೊತ್ತದ 0.1 ಪ್ರತಿಶತ ದಂಡವಿಧಿಸಲಾಗುತ್ತದೆ.
- ಮಸ್ತಕದ ಬಾಕ್ಸ್‌ಗಳನ್ನು "**ರಾಜ್ಯ ಶಿಕ್ಷಣ ಸಂಪನ್ಮೂಲ ಮತ್ತು ಮಾಹಿತಿ ಕೇಂದ್ರ, [ಸೆರಿಕ್ ಗ್ರಂಥಾಲಯ] ಸುಬೇದಾರ್ ಛತ್ರಂ ರಸ್ತೆ, ಶೇಷಾದ್ರಿಮರಂ [ಶೇಷಾದ್ರಿಮರಂ ಪೋಲೀಸ್ ಠಾಣೆ ಎದುರು], ಬೆಂಗಳೂರು**" ಇಲ್ಲಿ ದಾಸ್ತಾನು ಮಾಡಲಾಗಿದ್ದು, ಈ ಕಛೇರಿಯಿಂದ ಎತ್ತುವಳಿ ಮಾಡಬೇಕಿರುತ್ತದೆ. ಈ ಬಗ್ಗೆ ಸ್ಪರ್ಧಾತ್ಮಕ ದರಗಳನ್ನು ವಿವರವಾಗಿ ನೀಡಬೇಕು. ತಾವು ಸಲ್ಲಿಸುವ ದರಗಳು ಅನ್ವಯವಾಗುವ ಎಲ್ಲಾ ತೆರಿಗೆಗಳೂ ಒಳಗೊಂಡಿರಬೇಕು.
- ಮಸ್ತಕಗಳ ಬಾಕ್ಸ್‌ಗಳನ್ನು ಈ ಕಛೇರಿಯಿಂದ ನೀಡುವ ಆದೇಶದನ್ವಯ ಸೂಚಿತ ಸಂಖ್ಯೆಗಳಿಗೆ ಅನುಗುಣವಾಗಿ ರಾಜ್ಯದ ಎಲ್ಲಾ 34 ಡಿಡಿಪಿಐ ಕಛೇರಿಗಳಿಗೆ ಸುಸ್ಥಿತಿಯಲ್ಲಿ ಸಾಗಾಣಿಕೆಮಾಡಿ, ಸ್ವೀಕೃತಿಯನ್ನು ಪಡೆದು ಸಲ್ಲಿಸಿದ ನಂತರ ಸಾಗಾಣಿಕಾ ವೆಚ್ಚ ಪಾವತಿಸಲಾಗುವುದು.

- ದರಪಟ್ಟಿಯನ್ನು ಮೊಹರಾದ ಲಕೋಟೆಯಲ್ಲಿ **"ಸಹಾಯಕ ನಿರ್ದೇಶಕರು[ಆಡಳಿತ], ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು"** ಇವರಿಗೆ ತಲುಪಿಸುವುದು. ಲಕೋಟೆಯ ಮೇಲೆ **'ಸಗಟು ಖರೀದಿ ಯೋಜನೆಯಡಿ ಮಸ್ತಕಗಳ ಬಾಕ್ಸ್‌ಗಳ ಸಾಗಾಣಿಕೆ ದರಪಟ್ಟಿ'** ಎಂದು ನಮೂದಿಸುವುದು.
- ದರಪಟ್ಟಿಯನ್ನು **ದಿನಾಂಕ: 12-12-2014 ಸಂಜೆ 5.30 ಗಂಟೆಯೊಳಗಾಗಿ** ಈ ಕಛೇರಿಗೆ ಸಲ್ಲಿಸಬೇಕು. ವಿಳಂಬವಾಗಿ ಸಲ್ಲಿಸುವ ದರಪಟ್ಟಿಗಳನ್ನು ಸ್ವೀಕರಿಸಲಾಗುವುದಿಲ್ಲ.
- **ದರಪಟ್ಟಿಗಳನ್ನು ತೆರೆಯುವ ದಿನಾಂಕ: 15-12-2014**
- ಸಾಗಾಣಿಕಾ ಸಂಸ್ಥೆಯನ್ನು ಗುರುತಿಸಿ ಅಂತಿಮವಾಗಿ ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ನಿರ್ಣಯವೇ ಅಂತಿಮವಾಗಿರುತ್ತದೆ.
- ಈ ಪ್ರಕಟಣೆಯ ವಿವರಗಳನ್ನು ಇಲಾಖೆಯ ವೆಬ್‌ಸೈಟ್: schooleducation.kar.nic.in ನಲ್ಲಿ ಪಡೆಯಬಹುದಾಗಿರುತ್ತದೆ. ಹಾಗೂ ಕಛೇರಿ ವೇಳೆಯಲ್ಲಿ ದೂರವಾಣಿ ಸಂಖ್ಯೆ: 080-22213129 ಮತ್ತು 080-22214352ನ್ನು ಸಂಪರ್ಕಿಸ ಬಹುದಾಗಿರುತ್ತದೆ.

**(ಮಾನ್ಯ ಆಯುಕ್ತರಿಂದ ಅನುಮೋದಿಸಿದೆ)**

**(ಎನ್. ಚಂದ್ರಶೇಖರ)**
**ಜಂಟಿ ಆಯುಕ್ತರು(ಆಡಳಿತ)**

5-12-14